**ಹೆಚ್ಚುವರಿ ಸಿವಿಲ್ ಜಡ್ಜ್ ವ ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**
**ಸಿ.ಸಿ.ನಂ.ಃ536-2013**

ಸಿ.ಡಬ್ಲ್ಯೂಃ2
ಪಿ.ಡಬ್ಲ್ಯೂಃ2

| | | |
|---|---|---|
| ಸಾಕ್ಷಿದಾರರ ಹೆಸರು | : | ಉಲ್ಲಾಸ ಪೈ |
| ತಂದೆಯಃಗಂಡನ ಹೆಸರು | : | ಪುಂಡ್ಲಿಕ ಪೈ |
| ವಯಸ್ಸು | : | 60 |
| ಉದ್ಯೋಗ | : | ನಿವೃತ್ತ ಕೆ ಎಸ್ ಆರ್ ಟಿ ಸಿ ನೌಕರ |
| ವಾಸ್ತವ್ಯ | : | ಹೆರವಟ್ಟಾ, ಕುಮಟಾ. |

ದಿನಾಂಕಃ 07-04-2018 ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ ಃ –

ನನಗೆ ಚಾಸಾ 3ರವರ ಪರಿಚಯ ಇದ್ದು ಅವರು ನಮ್ಮ ನೆರೆಮನೆಯವರಾಗಿದ್ದಾರೆ. ಹೆರವಟ್ಟಾ ಗ್ರಾಮದಲ್ಲಿ ಸಾಣೆಯಮ್ಮಾ ದೇವಸ್ಥಾನದ ಮುಂದಿರುವ ಬಂಗಾರದ ಅಂಗಡಿ ಕಳುವು ಮಾಡಿದ ಬಗ್ಗೆ ಪೊಲೀಸರು ನಮ್ಮ ಪಂಚನಾಮೆಗೆ ಕರೆದಿರುತ್ತಾರೆ. ನಾವು ಹೋಗಿ ನೋಡಿದಾಗ ಬಂಗಾರದ ಅಂಗಡಿಯ ಹಿಂದುಗಡೆ ಬಾಗಿಲಿನ ಬೀಗ ಮುರಿದು ಬಾಗಿಲು ತೆಗೆದು ಕಳ್ಳತನವಾಗಿತ್ತು. ದಿನಾಂಕ 22-11-2011 ರಂದು ಸಮಯ ಬೆಳಿಗ್ಗೆ 11 ಗಂಟೆಗೆ ಪೊಲೀಸರು ಪಂಚನಾಮೆ ಮಾಡಿರುತ್ತಾರೆ. ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಬಂಗಾರದ ಅಂಗಡಿಯ ಹಿಂದುಗಡೆ ಬಾಗಿಲಿನ ಮುರಿದಿದ್ದ ಬೀಗವನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಬೀಗವನ್ನು ನೋಡಿದರೆ ಗುರುತಿಸುತ್ತೇನೆ. ನನಗೆ ಈಗ ಒಂದು ಬೀಗವನ್ನು ತೋರಿಸುತ್ತಿದ್ದು ಅದೇ ಸದರಿ ಬೀಗವಾಗಿರುತ್ತದೆಯೇ ಎಂದು ಹೇಳಲು ನನಗೆ ಸಾಧ್ಯವಿಲ್ಲಾ.

(ಈ ಹಂತದಲ್ಲಿ ಸ ಸ ಅರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಅಂತಾ ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿದ್ದಾರೆ. ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)

-2- ಸಿ.ಸಿ.ನಂ.ಃ536-2013

ಸಿ.ಡಬ್ಲ್ಯೂಃ2

ಪಿ.ಡಬ್ಲ್ಯೂಃ2

ಪಾಟೀ ಸವಾಲು ಸಸಅ ರವರಿಂದ,

ದಿನಾಂಕ 22-11-2011 ರಂದು ಹಳೆಹೆರವಟ್ಟಾ ಗ್ರಾಮದಲ್ಲಿರುವ ಸಾಣೆಯಮ್ಮಾ ದೇವಸ್ಥಾನದ ಎದುರಿನ ವಿನಯಾ ಜ್ಯುವೆಲರಿ ಅಂಗಡಿಯಲ್ಲಿ ಕಳ್ಳತನವಾದ ಬಗ್ಗೆ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಪಂಚನಾಮೆ ಮಾಡಿದಾಗ ನಾನು ಸ್ಥಳದಲ್ಲಿ ಇದ್ದೆ ಎಂದರೆ ಸರಿ. ಆ ವೇಳೆಯಲ್ಲಿ ಅಲ್ಲಿ ಕಳ್ಳತನವಾದ ಬಗ್ಗೆ ಸ್ಥಳದಲ್ಲಿ ಹಾಜರಿದ್ದ ಪ್ರಾಸಾ 1 ರವರು ಅವರ ಅಂಗಡಿ ಕಳ್ಳತನವಾದ ಬಗ್ಗೆ ಪೊಲಿಸರಿಗೆ ತೋರಿಸಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಕಾರವಾರದಿಂದ ಪೊಲೀಸರು ಶ್ವಾನದಳ ಕರೆದುಕೊಂಡು ಬಂದಿದ್ದರು ಎಂದರೆ ನಾನು ನೋಡಿರುವುದಿಲ್ಲಾ. ಪಂಚನಾಮೆಯ ಕಾಲದಲ್ಲಿ ಫಿರ್ಯಾದಿಯು ತನ್ನ ಅಂಗಡಿಯಲ್ಲಿ ಕಳ್ಳತನವಾದ ಬಗ್ಗೆ ಅಂಗಡಿಯ ಒಳಗಡೆ ಇದ್ದ ಕಪಾಟುಗಳು ಖಾಲಿ ಇದ್ದ ಬಗ್ಗೆ ಮತ್ತು ಆಭರಣ ಕಳುವಾದ ಬಗ್ಗೆ ತೋರಿಸಿದ್ದಾನೆ ಎಂದರೆ ಸರಿಯಲ್ಲಾ. ಅಂಗಡಿಯ ಹಿಂಬದಿ ಬಾಗಿಲಿಗೆ ಇದ್ದ ಬೀಗವನ್ನು ಮೀಟಿ ತೆಗೆದಿತ್ತು ಮತ್ತು ಅದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲಾ. ನನ್ನ ಸಮಕ್ಷಮ ಪೊಲೀಸರು ಬೀಗವನ್ನು ತೆಗೆದುಕೊಂಡು ಹೋಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಪೊಲೀಸರು ತೆಗೆದುಕೊಂಡು ಹೋದ ಬೀಗ ಮು ಮಾ 1 ರ ಬೀಗವಾಗಿದೆ ಎಂದರೆ ನನಗೆ ಗೊತ್ತಿಲ್ಲಾ. ನಾನು ಕೆ ಎಸ್ ಆರ್ ಟಿ ಸಿ ಯಲ್ಲಿ ಮ್ಯಾಕೆನಿಕ್ ಆಗಿ ಕೆಲಸ ಮಾಡುತ್ತಿದ್ದೆನು. ನಾನು ಎಸ್ ಎಸ್ ಎಲ್ ಸಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೆನು. ನಾನು ಪಂಚನಾಮೆಗೆ ಸಹಿ ಹಾಕಬೇಕಾದರೆ ಪೊಲೀಸರು ನನಗೆ ಜಬರ್‌ದಸ್ತಿ ಮಾಡಿ ಸಹಿ ಹಾಕಬೇಕೆಂದು ಹೆದರಿಸಿ ಯಾವುದೇ ಬೆದರಿಕೆ ಹಾಕಿರುವುದಿಲ್ಲಾ. ನಾನು ಪಂಚನಾಮೆಗೆ ಸಹಿ ಮಾಡಿದಾಗ ಅದರಲ್ಲಿ ಏನು ಬರೆದಿತ್ತು ಎಂದು ನಾನು ಕೇಳಿರುವುದಿಲ್ಲಾ ಮತ್ತು ಆ ರೀತಿಯಾಗಿ ಕೇಳಲು ನನಗೆ ತೊಂದರೆ ಇರಲಿಲ್ಲಾ. ನಾನು ಪಂಚನಾಮೆಯಲ್ಲಿ ಬರೆದಿರುವ ವಿಷಯಗಳನ್ನೆಲ್ಲಾ ನೋಡಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಾನು ನನ್ನ ಸಮಕ್ಷಮದಲ್ಲಿ ಅಂಗಡಿಯನ್ನೆಲ್ಲಾ ನೋಡಿ ಮು ಮಾ 1 ರ ಬೀಗವನ್ನು ಜಪ್ತಮಾಡಿಕೊಂಡಿದ್ದರೂ ಸಹ ನನಗೆ ಗೊತ್ತಿಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ಸಾಕ್ಷಿಯು ಮುಂದುವರೆದು ಬೀಗ ಜಪ್ತಮಾಡಿಕೊಂಡಿರುವುದನ್ನು ಮಾತ್ರ ತಾನು ನೋಡಿರುವುದಿಲ್ಲಾ ಎಂದು ನುಡಿದಿರುತ್ತಾರೆ.

ಪಾಟೀ ಸವಾಲು ಶ್ರೀ ಎನ್ ಎಂ ಎನ್ ವಕೀಲರು ಆರೋಪಿತನ ಪರವಾಗಿಃ

ನಮ್ಮ ಮನೆ ಸಾಣೆಯಮ್ಮಾ ದೇವಸ್ಥಾನದ ರಸ್ತೆಯಲ್ಲಿ ಇರುತ್ತದೆ. ಬಂಗಾರದ ಅಂಗಡಿಯ ಎದುರುಗಡೆಯೇ ನಮ್ಮ ಮನೆ ಇದೆ. ಪಂಚನಾಮೆಗೆ ಸಹಿ ಹಾಕಬೇಕೆಂದು ಪೊಲೀಸರು ನನಗೆ ಹೇಳಿರುತ್ತಾರೆ. ಆ ದಿನ ಸ್ಥಳಕ್ಕೆ ಅಜಮಾಸು ಇಬ್ಬರು ಪೊಲೀಸರು ಬಂದಿದ್ದಿರಬಹುದು. ನಾನು ಬಂಗಾರದ ಅಂಗಡಿಯ ಒಳಗೆ ಹೋಗಿ ನೋಡಿರುವುದಿಲ್ಲಾ. ಆ ಸಮಯದಲ್ಲಿ ಸ್ಥಳದಲ್ಲಿ ಆ ಕೇರಿಯವರೆಲ್ಲಾ ಬಂದಿದ್ದು ಸುಮಾರು 30-35 ಜನರು ಸೇರಿದ್ದರು. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲಾ ಎಂದರೆ ಸರಿ. ಪಂಚನಾಮೆಯನ್ನು ಎಲ್ಲಿ ಬರೆದಿದ್ದಾರೆ ಎಂದು ನನಗೆ ನಿಖರವಾಗಿ ಮಾಹಿತಿ ಇಲ್ಲಾ ಮನೆಯಲ್ಲಿ ಬರೆದಿರಬಹುದು. ನನ್ನ ಸಮ್ಮುಖದಲ್ಲಿ ಯಾವುದೇ ವಸ್ತುಗಳನ್ನು ಜಪ್ತಪಡಿಸಿಕೊಂಡಿಲ್ಲಾ ಎಂದರೆ ಸರಿ. ನಾನು ಸ್ಥಳದಲ್ಲಿ ಸುಮಾರು 15 ನಿಮಿಷಗಳ ಕಾಲ ಇದ್ದೆನು. ನಾನು ಆ ದಿನ 11 ಗಂಟೆಯಿಂದ 11-15 ನಿಮಿಷದವರೆಗೆ ಸ್ಥಳದಲ್ಲಿ ಇದ್ದು ಆ ನಂತರ ನನ್ನ ಕೆಲಸಕ್ಕೆ ಹೋಗಿರುತ್ತೇನೆ. ನಾನು ಸ್ಥಳದಲ್ಲಿ ಇದ್ದಂತಹ ಸಂದರ್ಭದಲ್ಲಿ ಯಾವುದೇ ಅಧಿಕಾರಿಗಳು ಅಥವಾ ಇತರ ಸಿಬ್ಬಂದಿಗಳು ಬಂದಿದ್ದನ್ನು ನಾನು ನೋಡಿರುವುದಿಲ್ಲಾ. ಪ್ರಾಸಾ 1 ರವರು ನಮ್ಮ ನೆರೆಹೊರೆಯವರಾಗಿದ್ದರಿಂದ ಅವರ ಪರಿಚಯ ಚೆನ್ನಾಗಿ ಇದೆ ಎಂದರೆ ಸರಿ. ಪ್ರಾಸಾ 1 ರವರಿಗೆ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲಾ. ನಾನು ಆ ದಿನ ಸ್ಥಳದಲ್ಲಿ ಪಂಚನಾಮೆಗೆ ಸಹಿ ಮಾಡಿದ್ದಿಲ್ಲಾ ಎಂದರೆ ಸರಿಯಲ್ಲಾ. ಆ ದಿನ ಚಾಸಾ 3 ರವರು ಸಹ ಪಂಚನಾಮೆಗೆ ಸಹಿ ಮಾಡಿಲ್ಲಾ ಎಂದರೆ ಸರಿಯಲ್ಲಾ. ನಾನು ಸ್ಥಳದಲ್ಲಿ ಪಂಚನಾಮೆ ಮಾಡಿದ್ದಾರೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲಾ. ಫಿರ್ಯಾದಿದಾರರಿಗೆ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ಈ ಪ್ರಕರಣದಲ್ಲಿರುವ ಆರೋಪಿಯ ಹೆಸರು ನನಗೆ ಗೊತ್ತಿರುವುದಿಲ್ಲಾ.

**ನ್ಯಾಯಾಲಯದ ಬೆಳಿಗ್ಗಿನ ಅವಧಿ ಮುಗಿದ ಕಾರಣ ಮುಂದಿನ ಪಾಟೀ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಓದಿ ಹೇಳಿ ಕೇಳಿ ಸರಿ ಇದೆ.**

**ಜೆ.ಎಂ.ಎಫ್.ಸಿ. ಕುಮಟಾ.**